## ಕರ್ನಾಟಕ ಸರ್ಕಾರ

ಸಂಖ್ಯೆ: ಮಮಇ 352 ಪಿಹೆಚ್‌ಪಿ 2014

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:04.05.2016

## ಅಧಿಸೂಚನೆ

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ–1995 (1996ರ ಕೇಂದ್ರದ ಅಧಿನಿಯಮ ಸಂಖ್ಯೆ–1) ರ ಪ್ರಕರಣ 73ರ ಉಪ ಪ್ರಕರಣ (1)ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) (ಕರ್ನಾಟಕ) (ತಿದ್ದುಪಡಿ) ನಿಯಮಗಳು–2015ರ ಕರಡನ್ನು ಅಧಿಸೂಚನೆ ಸಂಖ್ಯೆ: ಡಬ್ಲ್ಯೂಸಿಡಿ/352/ಪಿಹೆಚ್‌ಪಿ/2014, ದಿ:30.01.2016ನ್ನು ದಿ:30.01.2016ರಂದು ಕರ್ನಾಟಕ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿದ್ದು, ಆ ಮೂಲಕ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳಿಂದ 15 ದಿನಗಳೊಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿ:30.01.2016ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಕರಡು ನಿಯಮಗಳ ಬಗ್ಗೆ ರಾಜ್ಯ ಸರ್ಕಾರವು ಸಾರ್ವಜನಿಕರಿಂದ ಸ್ವೀಕೃತವಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ಪರಿಗಣಿಸಿರುವುದರಿಂದ;

ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ–1995 (1996ರ ಕೇಂದ್ರದ ಅಧಿನಿಯಮ ಸಂಖ್ಯೆ–1) ರ ಪ್ರಕರಣ 73ರ ಉಪ ಪ್ರಕರಣ (1)ರಲ್ಲಿನ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಕಂಡಂತೆ ನಿಯಮಗಳನ್ನು ರಚಿಸಿರುತ್ತದೆ.

### ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ:–**

   (1)ಈ ನಿಯಮಗಳನ್ನು ಅಂಗವಿಕಲರ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಹಾಗೂ ಸಂಪೂರ್ಣ ಭಾಗವಹಿಸುವಿಕೆ) (ಕರ್ನಾಟಕ) (ತಿದ್ದುಪಡಿ) ನಿಯಮಗಳು, 2016 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನಿಯಮ 2ರ ತಿದ್ದುಪಡಿ:–** ಅಂಗವಿಕಲರ ಅಧಿನಿಯಮ (ಸಮಾನ ಅವಕಾಷ' ಹಕ್ಕುಗಳ ಸಂರಕ್ಷಣೆ ಹಾಗೂ ಸಂಪೂರ್ಣ ಭಾಗವಹಿಸುವಿಕೆ) (ಕರ್ನಾಟಕ) ನಿಯಮಗಳು. 2003ರಲ್ಲಿ (ಇನ್ನು ಮುಂದೆ ಸದರಿ ನಿಯಮಗಳೆಂದು ಓದುವುದು), ನಿಯಮ 2ರ ಉಪ ನಿಯಮ (ಎ) ನಂತರ, ಕೆಳಕಂಡವುಗಳನ್ನು ಸೇರಿಸುವುದು.

284

(ಎ1) "ಅಂಗವಿಕಲತೆಯ ಪ್ರಮಾಣ ಪತ್ರ" ಎಂದರೆ ನಿಯಮ 2ರ ಉಪ ನಿಯಮ (ಟಿ) ಯಲ್ಲಿ ವ್ಯಾಖ್ಯಾನಿಸಿರುವಂತೆ ಅಂಗವಿಕಲ ವ್ಯಕ್ತಿಗೆ ನೀಡಿರುವ ಪ್ರಮಾಣ ಪತ್ರ.

(ಎ2) "ನಮೂನೆ" ಅಂದರೆ ಈ ನಿಯಮಗಳೊಂದಿಗೆ ಲಗತ್ತಿಸಿರುವ ನಮೂನೆ.

(ಎ3) "ಬಹುವಿಧ ಅಂಗವಿಕಲತೆಯ ಪ್ರಮಾಣ ಪತ್ರ" ಅಂದರೆ ಕಾಯ್ದೆಯ ನಿಯಮ ಉಪ ನಿಯಮ (ಐ) ರಲ್ಲಿ ವ್ಯಾಖ್ಯಾನಿಸಿರುವಂತೆ 2 ಅಥವಾ ಹೆಚ್ಚಿನ ಅಂಗವಿಕಲತೆಯ ಒಳಗೊಂಡಿರುವ ಪ್ರಮಾಣ ಪತ್ರ.

3. **ನಿಯಮ 3ರ ಪರ್ಯಾಯ:–** ಹೇಳಿರುವ ನಿಯಮ 3ರ ಪರ್ಯಾಯವಾಗಿ ಈ ಕೆಳಕಂಡಂತೆ ಸೇರಿಸುವುದು.

**" 3 ಶಾಶ್ವತ ಅಂಗವಿಕಲ ಪ್ರಮಾಣ ಪತ್ರ ನೀಡಲು ಅರ್ಜಿ**

(1) ಶಾಶ್ವತ ಅಂಗವಿಕಲತೆ ಹೊಂದಿರುವ ವ್ಯಕ್ತಿಯು ನಮೂನೆ 1ರಲ್ಲಿ ವೈದ್ಯಕೀಯ ಪ್ರಾಧಿಕಾರಕ್ಕೆ ಅವರ ವಾಸಸ್ಥಳದ ವಿಳಾಸದ ದೃಢೀಕರಣದೊಂದಿಗೆ ಹಾಗೂ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಲಗತ್ತಿಸಿ ಅರ್ಜಿಯನ್ನು ಸಲ್ಲಿಸುವುದು.

(2) ಅರ್ಜಿದಾರರು ವಾಸಿಸುವ ವಾಸಸ್ಥಳದ ಮಾಹಿತಿಯನ್ನು ಅವರ ಅರ್ಜಿಯಲ್ಲಿ ಸಲ್ಲಿಸಿದಂತೆ ಸಂಬಂಧಿತ ಜಿಲ್ಲಾ / ತಾಲ್ಲೂಕು / ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಸಮರ್ಥ ವೈದ್ಯಕೀಯ ಪ್ರಾಧಿಕಾರಕ್ಕೆ ಅಥವಾ ಅವರ ಶಾಶ್ವತ ಅಂಗವಿಕಲತೆಯ ಕುರಿತು ಚಿಕಿತ್ಸೆ ಪಡೆದಿರುವ ಅಥವಾ ಪಡೆಯಬೇಕಿರುವ ಸರ್ಕಾರಿ ಆಸ್ಪತ್ರೆಯಲ್ಲಿ ಖುದ್ದಾಗಿ ಅರ್ಜಿಯನ್ನು ಸಲ್ಲಿಸುವುದು:

ಶಾಶ್ವತ ಅಂಗವಿಕಲತೆ ಹೊಂದಿರುವ ಅಪ್ರಾಪ್ತ ವ್ಯಕ್ತಿಯು ಅಥವಾ ಬುದ್ಧಿಮಾಂದ್ಯತೆ ಅಥವಾ ಇನ್ನಾವುದೇ ಆಂಗವಿಕಲತೆಯಿಂದ ಅವನು / ಅವಳು ಅನರ್ಹವೆಂದು ಅಥವಾ ಅಂತಹ ವ್ಯಕ್ತಿಯು ಅರ್ಜಿಯನ್ನು ಖುದ್ದಾಗಿ ಸಲ್ಲಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದಲ್ಲಿ ಅವನ / ಅವಳ ಪರವಾಗಿ ಕಾನೂನಾತ್ಮಕವಾಗಿ ನಿರ್ಧರಿಸಲಾದ ಪೋಷಕರ ಮೂಲಕ ಅರ್ಜಿಯನ್ನು ಸಲ್ಲಿಸುವುದು.

**3A ಶಾಶ್ವತ ಅಂಗವಿಕಲತೆ ಪ್ರಮಾಣ ಪತ್ರವನ್ನು ನೀಡುವ ಕುರಿತು:**

(1) ಸ್ವೀಕೃತಗೊಂಡ ಅರ್ಜಿಯನ್ನು ನಿಯಮ 3ರ ಉಪ ನಿಯಮ 1ರಂತೆ ವೈದ್ಯಕೀಯ ಪ್ರಾಧಿಕಾರವು ಷರತ್ತು 1ರ ವಿಭಾಗ 2ರಲ್ಲಿ ಶಾಶ್ವತ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ ವ್ಯಾಖ್ಯಾನಿಸಿದಂತೆ ತೃಪ್ತಿಗೊಂಡಲ್ಲಿ ಆಯಾ ಸಂಬಂಧಿತ II, III ಅಥವಾ IVರ ನಮೂನೆಗಳಲ್ಲಿ ಆಯಾ ವ್ಯಕ್ತಿಯು ಹೊಂದಿರುವ ಅಂಗವಿಕಲತೆಯ ಪ್ರಮಾಣದಂತೆ ಶಾಶ್ವತ ವೈದ್ಯಕೀಯ ಪ್ರಮಾಣ ಪತ್ರವನ್ನು ವಿತರಿಸಬಹುದು;

(2) ವಿಕಲಚೇತನರ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಲು ವೈದ್ಯಕೀಯ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿದ 7 ದಿನಗಳೊಳಗೆ ಅಥವಾ ಗರಿಷ್ಠ 30 ದಿನಗಳ ವ್ಯಾಪ್ತಿಯಲ್ಲಿ ಇಲಾಖೆಯಿಂದ ನಿಗದಿಪಡಿಸಲಾದ ವಿಕಲಚೇತನರ ಗುರುತಿನ ಚೀಟಿಯ ನಮೂನೆಯಲ್ಲಿ ಶಾಶ್ವತ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನೀಡಿ ಗುರುತಿನ ಚೀಟಿಯಲ್ಲಿ ಅಂಗವಿಕಲತೆಯ ಪ್ರಮಾಣವನ್ನು ನಮೂದಿಸುವುದು,

(3) ಆಯಾ ಸಂಬಂಧಿತ ಜಿಲ್ಲಾ / ತಾಲ್ಲೂಕು / ಪ್ರಾಥಮಿಕ ಆರೋಗ್ಯ ಕೇಂದ್ರಗಳ ವ್ಯಾಪ್ತಿಯ ವೈದ್ಯಕೀಯ ಪ್ರಾಧಿಕಾರವು ವಿಕಲಚೇತನ ವ್ಯಕ್ತಿಯು ಹೊಂದಿರುವ ಅಂಗವಿಕಲತೆಯ ಪ್ರಮಾಣದ ಅನುಗುಣವಾಗಿ ಎಲ್ಲಾ ವೈದ್ಯಕೀಯ ತಪಾಸಣೆಗಳನ್ನು ಮಾಡಿದ ನಂತರ ಮುಂದೆ ಯಾವುದೇ ರೀತಿಯ ಚಿಕಿತ್ಸೆ ನೀಡಿದಾಗ್ಯೂ ವಿಕಲಚೇತನ ವ್ಯಕ್ತಿಯು ಹೊಂದಿರುವ ಅಂಗವಿಕಲತೆಯ

ಪ್ರಮಾಣವನ್ನು ಕಡಿಮೆಗೊಳಿಸುವುದು ಅಸಾಧ್ಯ ಎಂದು ತೃಪ್ತಿ ಹೊಂದಿದಲ್ಲಿ ಶಾಶ್ವತ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನೀಡುವುದು.

(4) ಅರ್ಜಿದಾರರಿಗೆ ಶಾಶ್ವತ ಅಂಗವಿಕಲತೆ ಪ್ರಮಾಣ ಪತ್ರವನ್ನು ನೀಡಲು ವೈದ್ಯಕೀಯ ಪ್ರಾಧಿಕಾರವು ಅರ್ಜಿದಾರರು ಅನರ್ಹರೆಂದು ನಿರ್ಧಾರವನ್ನು ತೆಗೆದುಕೊಂಡಲ್ಲಿ, ಅದರಂತೆ ಸಕಾರಣಗಳೊಂದಿಗೆ ಸೂಕ್ತ ಹಿಂಬರಹವನ್ನು ಸಂಬಂಧಿತ ಅರ್ಜಿದಾರರಿಗೆ ಲಿಖಿತವಾಗಿ ನೀಡಿ ತಿಳಿಸುವುದು.

(5) ಈ ತರಹ ವೈದ್ಯಕೀಯ ಪ್ರಾಧಿಕಾರಗಳಿಂದ ವಿತರಿಸಲಾದ ಶಾಶ್ವತ ವೈದ್ಯಕೀಯ ಪ್ರಮಾಣ ಪತ್ರದ ಪ್ರತಿಯನ್ನು ಆಯಾ ಸಂಬಂಧಿತ ಜಿಲ್ಲಾ ಮಟ್ಟದ ಮುಖ್ಯ ವೈದ್ಯಾಧಿಕಾರಿಗಳು ಅಥವಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಏಕ ಕಾಲದಲ್ಲಿ ಕಳುಹಿಸುವುದು.

**3B. ಖಾಯಂ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಲು ಅಥವಾ ನಿರಾಕರಿಸಲು ನಿರ್ಧರಿಸಿದ ಕ್ರಮವನ್ನು ಮರುಪರಿಶೀಲಿಸುವ ಬಗ್ಗೆ.**

1. ಯಾವುದೇ ಅರ್ಜಿದಾರರು ಅವರಿಗೆ ವಿತರಿಸಲಾದ ವೈದ್ಯಕೀಯ ಪ್ರಮಾಣ ಪತ್ರದ ಬಗ್ಗೆ ಬಾಧಿತರಾದಲ್ಲಿ ಅಥವಾ ಅಂತಹ ಪ್ರಮಾಣ ಪತ್ರವನ್ನು ನೀಡಲು ವೈದ್ಯಕೀಯ ಪ್ರಾಧಿಕಾರ ತಿರಸ್ಕರಿಸಿದಲ್ಲಿ ಅಂತಹ ಅರ್ಜಿದಾರರು ಪ್ರಮಾಣ ಪತ್ರ ನೀಡಿದ ವೈದ್ಯಕೀಯ ಪ್ರಾಧಿಕಾರಕ್ಕಿಂತ ಉನ್ನತ ವೈದ್ಯಕೀಯ ಮೇಲ್ಮನವಿ ವೈದ್ಯಕೀಯ ಪ್ರಾಧಿಕಾರಕ್ಕೆ ಶಾಶ್ವತ ಪ್ರಮಾಣ ಪತ್ರವನ್ನು ವಿತರಿಸಿದ ದಿನಾಂಕದ 15 ದಿನಗಳೊಳಗೆ ಮೇಲ್ಮನವಿ ಅರ್ಜಿಯನ್ನು ಸಲ್ಲಿಸುವುದು:

ಶಾಶ್ವತ ಅಂಗವಿಕಲತೆ ಹೊಂದಿರುವ ಅಪ್ರಾಪ್ತ ವ್ಯಕ್ತಿಯು ಅಥವಾ ಬುದ್ಧಿಮಾಂದ್ಯತೆ ಅಥವಾ ಇನ್ಯಾವುದೇ ಆಂಗವಿಕಲತೆಯಿಂದ ಅವನು / ಅವಳು ಅನರ್ಹವೆಂದು ಅಥವಾ ಅಂತಹ ವ್ಯಕ್ತಿಯು ಅರ್ಜಿಯನ್ನು ಖುದ್ದಾಗಿ ಸಲ್ಲಿಸಲು ಸಾಧ್ಯವಿಲ್ಲವೆಂದು ಎಂದು ತೀರ್ಮಾನಿಸಿದಲ್ಲಿ ಅವನ / ಅವಳ ಪರವಾಗಿ ಕಾನೂನಾತ್ಮಕವಾಗಿ ನಿರ್ಧರಿಸಲಾದ ಪೋಷಕರ ಮೂಲಕ ಅರ್ಜಿಯನ್ನು ಸಲ್ಲಿಸುವುದು.

2. ವೈದ್ಯಕೀಯ ಪ್ರಾಧಿಕಾರದ ನಿರ್ಧಾರದ ವಿರುದ್ಧ ಮೇಲ್ಮನವಿ ವೈದ್ಯಕೀಯ ಪ್ರಾಧಿಕಾರಕ್ಕೆ ಸಲ್ಲಿಸಲಾಗುವ ಮೇಲ್ಮನವಿ ಅರ್ಜಿಯೊಂದಿಗೆ ವೈದ್ಯಕೀಯ ಪ್ರಾಧಿಕಾರದಿಂದ ನೀಡಲಾದ ವೈದ್ಯಕೀಯ ಪ್ರಮಾಣ ಪತ್ರ ಅಥವಾ ಪ್ರಮಾಣ ಪತ್ರ ನೀಡಲು ತಿರಸ್ಕರಿಸಿರುವ ಬಗ್ಗೆ ಲಿಖಿತವಾಗಿ ನೀಡಿದ ಪತ್ರದೊಂದಿಗೆ ಸಲ್ಲಿಸುವುದು.
3. ವೈದ್ಯಕೀಯ ಪ್ರಾಧಿಕಾರದ ಮೇಲ್ಮನವಿ ಪ್ರಾಧಿಕಾರವು ಸ್ವೀಕರಿಸಲಾದ ಲಿಖಿತ ಮೇಲ್ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ, ಸಂಬಂಧಿತ ಅರ್ಜಿದಾರರು ತಮ್ಮ ಹೇಳಿಕೆಯನ್ನು ನೀಡಲು ಒಂದು ಅವಕಾಶಕೊಟ್ಟು, ತದನಂತರ ತನಗೆ ಸೂಕ್ತವೆನಿಸಿದ ಆದೇಶವನ್ನು ಹೊರಡಿಸುವುದು.
4. ವೈದ್ಯಕೀಯ ಪ್ರಾಧಿಕಾರದ ಮೇಲ್ಮನವಿ ಪ್ರಾಧಿಕಾರದಿಂದ ಸ್ವೀಕರಿಸಲಾದ ಲಿಖಿತ ಮೇಲ್ಮನವಿ ಅರ್ಜಿಯ ದಿನಾಂಕದಿಂದ 15 ದಿನಗಳೊಳಗೆ ಅಥವಾ ಗರಿಷ್ಠ 30 ದಿನಗಳೊಳಗೆ ಇತ್ಯರ್ಥಗೊಳಿಸುವುದು.

**3C. ನಿಯಮ 3(a) ರಂತೆ ವಿತರಿಸಲಾದ ಪ್ರಮಾಣ ಪತ್ರವನ್ನು ಸಾಮಾನ್ಯವಾಗಿ ನೀಡಲಾಗುವ ಎಲ್ಲಾ ಉದ್ದೇಶಗಳಿಗಾಗಿ ಮಾನ್ಯ ಮಾಡುವ ಬಗ್ಗೆ :-**

ನಿಯಮ 3(a) ರಂತೆ ವಿತರಿಸಲಾದ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ವಿವಿಧ ಸೌಲಭ್ಯ, ರಿಯಾಯಿತಿ ಮತ್ತು ಸಾಮಾನ್ಯವಾಗಿ ಸರ್ಕಾರ ಮತ್ತು ಸರ್ಕಾರದ ಅನುದಾನಿತ ಸಂಸ್ಥೆಗಳ ಮೂಲಕ ನೀಡಲಾಗುವ ಎಲ್ಲಾ ಸೌಲಭ್ಯಗಳನ್ನು ಆಯಾ ಯೋಜನೆಗಳ ಷರತ್ತು ಮತ್ತು ಕಾಲ ಕಾಲಕ್ಕೆ ಸರ್ಕಾರದಿಂದ ನೀಡಲಾಗುವ ಸೂಚನೆಗೆ ಒಳಪಟ್ಟು ಪಡೆಯಬಹುದಾಗಿದೆ.

282

**4. ನಿಯಮ 33ರ ಪರ್ಯಾಯ:**

ಹಾಲಿ ಇರುವ ನಿಯಮಗಳಲ್ಲಿ, ನಿಯಮ 33ರ ಪರ್ಯಾಯವಾಗಿ ಈ ಕೆಳಕಂಡ ಪರ್ಯಾಯ ನಿಯಮಗಳನ್ನು:-

**"33. ರಾಜ್ಯ ಆಯುಕ್ತರನ್ನು ನೇಮಕಾತಿ ಮಾಡಲು ನಿಗದಿಪಡಿಸಿದ ವಿದ್ಯಾರ್ಹತೆ**

**(1) ರಾಜ್ಯ ಆಯುಕ್ತರಾಗಿ ನೇಮಕಗೊಳ್ಳಲು ಸಂಬಂಧಿತ ವ್ಯಕ್ತಿಯು ಈ ಕೆಳಗಿನ ವಿದ್ಯಾರ್ಹತೆಗಳನ್ನು ಹೊಂದಿರತಕ್ಕದ್ದು.**

(a) ಅವರು ವಿಕಲಚೇತನರ ಪುನರ್ವಸತಿ ಕ್ಷೇತ್ರದಲ್ಲಿ ವಿಶೇಷ ಜ್ಞಾನವನ್ನು ಮತ್ತು ಪ್ರಾಯೋಗಿಕ ಅನುಭವನ್ನು ಹೊಂದಿರತಕ್ಕದ್ದು.

(b) ಅವರು 33(a) ನಿಯಮದ ಉಪ ನಿಯಮ 1ರಂತೆ ರಾಜ್ಯ ಆಯುಕ್ತರ ನೇಮಕಾತಿಗಾಗಿ ಅರ್ಜಿಯನ್ನು ಜಾಹಿರಾತು ಪ್ರಕಟಣೆಯ ಮೂಲಕ ಕರೆಯಲು ನಿಗದಿಪಡಿಸಿದ ಅಂತಿಮ ದಿನಾಂಕದ ವರ್ಷದ ಮೊದಲನೇ ಜನವರಿ ತಿಂಗಳಿಗೆ 60 ವರ್ಷಕ್ಕೆ ಮೀರಿರಬಾರದು.

(C) ಅವರು ಕೇಂದ್ರ / ರಾಜ್ಯ ಸರ್ಕಾರದ ಉದ್ಯೋಗಿ ಆಗಿದ್ದಲ್ಲಿ, ಈ ನೇಮಕಾತಿ ಹೊಂದಲು ಬಯಸಿದ್ದಲ್ಲಿ ಸದರಿ ಉದ್ಯೋಗದಿಂದ ಪೂರ್ವಭಾವಿಯಾಗಿ ನಿವೃತ್ತಿ ಪಡೆದು ನಿಗದಿಪಡಿಸಿದ ವಯೋಮಿತಿಯೊಳಗೆ ಅರ್ಜಿಯನ್ನು ಸಲ್ಲಿಸುವುದು; ಮತ್ತು

(D) ಅವರು ಈ ಕೆಳಗಿನ ವಿದ್ಯಾರ್ಹತೆ ಮತ್ತು ಅನುಭವವನ್ನು ಹೊಂದಿರತಕ್ಕದ್ದು

**(I) ಶೈಕ್ಷಣಿಕ ವಿದ್ಯಾರ್ಹತೆ**

1. ಶಾಸನ ಬದ್ಧವಾಗಿ ರಚಿಸಲಾದ ಯಾವುದೇ ವಿಶ್ವ ವಿದ್ಯಾನಿಲಯದಿಂದ ಪದವಿಯನ್ನು ಪಡೆದಿರತಕ್ಕದ್ದು

2. ಸ್ನಾತಕೋತ್ತರ ಪದವಿ/ಸಮಾಜ ಸೇವೆಯಲ್ಲಿ ಡಿಪ್ಲೊಮಾ/ ಕಾನೂನು/ ನಿರ್ವಹಣೆ / ಮಾನವ ಹಕ್ಕು /ಪುನರ್ವಸತಿ /ವಿಕಲಚೇತನರ ಶಿಕ್ಷಣ /ಮಾನವಿಕ ಶಿಕ್ಷಣ (Humanities Education) ವಿದ್ಯಾರ್ಹತೆಯನ್ನು ಪಡೆದಿರತಕ್ಕದ್ದು ಅಪೇಕ್ಷಣೀಯ.

**(2) ಅನುಭವ:**

**i. ಕೇಂದ್ರ / ರಾಜ್ಯ ಸರ್ಕಾರದ ಉದ್ಯೋಗಿ ಅಥವಾ ನಿವೃತ್ತ ಅಧಿಕಾರಿಗಳಾಗಿ.**

ಕೇಂದ್ರ / ರಾಜ್ಯ ಸರ್ಕಾರದ A ವೃಂದದ ಅಧಿಕಾರಿಯಾಗಿ ಕನಿಷ್ಠ 15 ವರ್ಷ ಸೇವೆಯನ್ನು ಸಲ್ಲಿಸಿರುವುದು ಮತ್ತು ಅದರಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಕನಿಷ್ಠ 1 ವರ್ಷದ ಅವಧಿಗೆ ಸೇವೆಯನ್ನು ಸಲ್ಲಿಸಿರತಕ್ಕದ್ದು: ಮತ್ತು

**ii. ಇತರರಿಗಾಗಿ:**

(a) ವಿಕಲಚೇತನರ ಕ್ಷೇತ್ರದ ವಿಭಾಗವನ್ನು ನಿರ್ವಹಿಸುತ್ತಿರುವ ಕೇಂದ್ರ / ರಾಜ್ಯ ಸರ್ಕಾರ / ಸರ್ಕಾರಿ ಸಾರ್ವಜನಿಕ ವಲಯದ ಉದ್ದಿಮೆ / ಅರೆ ಸರ್ಕಾರಿ / ಸ್ವಾಯತ್ ಸಂಸ್ಥೆಗಳಿಂದ ಮಾನ್ಯತೆ ಹೊಂದಿರುವ ನೊಂದಾಯಿಸಿದ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದ ಸ್ವಯಂ ಸೇವಾ ಸಂಸ್ಥೆಗಳಲ್ಲಿಯ ಉನ್ನತ ಮಟ್ಟದ ಸಂಪನ್ಮೂಲ ವ್ಯಕ್ತಿಯು ವಿಕಲಚೇತನರ ಪುನರ್ವಸತಿ ಕ್ಷೇತ್ರದಲ್ಲಿ ಕನಿಷ್ಠ 25 ವರ್ಷಗಳ ಸೇವಾ ಅನುಭವವನ್ನು ಹೊಂದಿರತಕ್ಕದ್ದು: ಅಥವಾ

(b) ಸಮಾಜ ಸೇವೆ ಮತ್ತು ವಿಕಲಚೇತನರ ಪುನರ್ವಸತಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಸರ್ಕಾರದಿಂದ ಮಾನ್ಯತೆ ಹೊಂದಿರುವ ಹೆಸರಾಂತ ಸಂಸ್ಥೆಗಳಲ್ಲಿಯ ಉನ್ನತ

ನಿರ್ವಹಣಾ ಅಧಿಕಾರಿಗಳ ಹುದ್ದೆಯಲ್ಲಿ ಕನಿಷ್ಠ 25 ವರ್ಷಗಳ ಸೇವಾ ಅನುಭವವನ್ನು ಹೊಂದಿರತಕ್ಕದ್ದು.

**33 A. ರಾಜ್ಯ ಆಯುಕ್ತರನ್ನು ನೇಮಕಾತಿ ಮಾಡುವ ವಿಧಾನ**

(1) ರಾಜ್ಯ ಆಯುಕ್ತರ ಹುದ್ದೆಯು ನೇಮಕಾತಿಗಾಗಿ ರಿಕ್ತವಾಗುವ ದಿನಾಂಕದ ಅವಧಿಯ 6 ತಿಂಗಳ ಮುನ್ನ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರಿಂದ ಕನಿಷ್ಠ 2 ರಾಜ್ಯ ಮಟ್ಟದ ಆಂಗ್ಲ ಮತ್ತು ಕನ್ನಡ ಭಾಷೆಯ ತಲಾ ಒಂದೊಂದು ಪತ್ರಿಕೆಗಳ ಮೂಲಕ ನಿಯಮ 33ರಂತೆ ಜಾಹಿರಾತನ್ನು ನೀಡಿ ಅರ್ಹ ಮತ್ತು ಅನುಭವಿ ಅರ್ಜಿದಾರರಿಂದ ಅರ್ಜಿಗಳನ್ನು ಸಲ್ಲಿಸಲು ಪ್ರಕಟಿಸುವುದು.

(2) ಶೋಧನಾ ಮತ್ತು ಆಯ್ಕೆ ಸಮಿತಿಯು ಕೆಳಗಿನ ಸದಸ್ಯರುಗಳನ್ನು ಹೊಂದಿರತಕ್ಕದ್ದು.

| | | |
|---|---|---|
| (ಎ) ಅಧ್ಯಕ್ಷರು | – | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು. |
| (ಬಿ) ಸದಸ್ಯರು | – | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು. |
| (ಸಿ) ಸದಸ್ಯರು | – | ವಿಕಲಚೇತನರ ಪುನರ್ವಸತಿ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವ ರಾಷ್ಟ್ರೀಯ ನರರೋಗವಿಜ್ಞಾನ ಮತ್ತು ಮಾನಸಿಕ ಆರೋಗ್ಯ ಸಂಸ್ಥೆ ಬೆಂಗಳೂರು. (ನಿಮ್ಹಾನ್ಸ್) ರವರ ಪ್ರತಿನಿಧಿ. |
| (ಡಿ) ಸದಸ್ಯ ಕಾರ್ಯದರ್ಶಿ | – | ಸರ್ಕಾರದ ಜಂಟಿ / ಉಪ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು. |

(3) ರಾಜ್ಯ ಆಯುಕ್ತರ ಹುದ್ದೆಗೆ ಆಯ್ಕೆ ಮಾಡಲು ಉಪ ನಿಯಮ 1ರಂತೆ ಜಾಹಿರಾತು ಮೂಲಕ ನೀಡಿದ ಪ್ರಕಟಣೆಗೆ ಸ್ಪಂಧಿಸಿ ರಾಜ್ಯ ಆಯುಕ್ತರ ಹುದ್ದೆಗೆ ಆಯ್ಕೆ ಮಾಡಲು ಸಲ್ಲಿಸಲಾದ ಅರ್ಹ ಅರ್ಜಿಗಳಲ್ಲಿ ಶೋಧನಾ ಮತ್ತು ಆಯ್ಕೆ ಸಮಿತಿಯು 3 ಅಭ್ಯರ್ಥಿಗಳ ಫಲಕ ಪಟ್ಟಿಯನ್ನು ಶಿಫಾರಸ್ಸು ಮಾಡುವುದು. ಹುದ್ದೆಯ ನೇಮಕಾತಿಗಾಗಿ ಸ್ವೀಕರಿಸಲಾದ ಅರ್ಜಿಗಳಲ್ಲಿ ಯಾವುದೇ ಅರ್ಹ ಅಭ್ಯರ್ಥಿಯು ಇರದಿದ್ದಲ್ಲಿ, ಹುದ್ದೆಯ ನೇಮಕಾತಿಗಾಗಿ ಹೊಸದಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಕರೆಯುವ ಪ್ರಕ್ರಿಯೆಯನ್ನು ಪ್ರಾರಂಭಿಸತಕ್ಕದ್ದು.

(4) ಶೋಧನಾ ಮತ್ತು ಆಯ್ಕೆ ಸಮಿತಿಯ ಮೂಲಕ ರಾಜ್ಯ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾದ ಅಭ್ಯರ್ಥಿಗಳಲ್ಲಿ ಓರ್ವ ಅಭ್ಯರ್ಥಿಯನ್ನು ರಾಜ್ಯ ಆಯುಕ್ತರನ್ನಾಗಿ ರಾಜ್ಯ ಸರ್ಕಾರದಿಂದ ನೇಮಿಸುವುದು.

**33 B. ರಾಜ್ಯ ಆಯುಕ್ತರ ಅಧಿಕಾರ ಅವಧಿ:**

(1) ಪೂರ್ಣ ಸಮಯಕ್ಕಾಗಿ ರಾಜ್ಯ ಆಯುಕ್ತರನ್ನು ಅವರು ಅಧಿಕಾರ ವಹಿಸಕೊಂಡ ದಿನದಿಂದ 3 ವರ್ಷಗಳ ಅವಧಿಯವರೆಗೆ ಅಥವಾ 60 ವರ್ಷ ವಯಸ್ಸು ತುಂಬುವವರೆಗೆ ಯಾವುದು ಮೊದಲು ಅಲ್ಲಿಯವರೆಗೆ ನೇಮಿಸಲಾಗುವುದು.

(2) ರಾಜ್ಯ ಆಯುಕ್ತರಾಗಿ ಕೇವಲ ಒಂದು ಅವಧಿಗೆ ಒಬ್ಬ ವ್ಯಕ್ತಿಯು ಕಾರ್ಯನಿರ್ವಹಿಸುವುದು. ಅವನು / ಅವಳು ಮರು ನೇಮಕಾತಿಗಾಗಿ ಅರ್ಹರಿರುವುದಿಲ್ಲ.

**33 C. ರಾಜ್ಯ ಆಯುಕ್ತರ ವೇತನ ಮತ್ತು ಭತ್ಯೆ:**

ಇಲಾಖಾ ಮುಖ್ಯಸ್ಥರಿಗೆ ಕರ್ನಾಟಕ ಸರ್ಕಾರದಲ್ಲಿ ಹಾಲಿ ನಿಗದಿಪಡಿಸಲಾದ ವೇತನ ಶ್ರೇಣಿ ರೂ. 40050–1050–45300–1200–52500–1350–56550 ರಂತೆ ರಾಜ್ಯ ಆಯುಕ್ತರು ವೇತನ ಭತ್ಯೆಯನ್ನು ಪಡೆಯುವುದು.

**33 D. ರಾಜ್ಯ ಆಯುಕ್ತರ ಇತರೆ ನಿಯಮಗಳು ಮತ್ತು ಸೇವಾ ಷರತ್ತುಗಳು:**

**(1) ರಜೆ:**

ಕರ್ನಾಟಕ ರಾಜ್ಯ ಸಾರ್ವಜನಿಕ ಸೇವಾ ನಿಯಮಾವಳಿಯಂತೆ ರಾಜ್ಯ ಸರ್ಕಾರದ ನೌಕರರು ರಜೆಯನ್ನು ಪಡೆಯಲು ಅರ್ಹತೆ ಹೊಂದಿರುವಂತೆ ರಾಜ್ಯ ಆಯುಕ್ತರು ರಜೆಗಳನ್ನು ಪಡೆಯುವುದು.

**(2) ರಜೆ ಅವಧಿಯಲ್ಲಿ ಪ್ರಯಾಣದ ರಿಯಾಯಿತಿ ಸೌಲಭ್ಯ:**

ರಾಜ್ಯ ಸರ್ಕಾರದ ಸಾರ್ವಜನಿಕ ಸೇವಾ ನಿಯಮಾವಳಿಯಂತೆ 'ಎ' ವೃಂದದ ಅಧಿಕಾರಿಯು ರಜೆ ಅವಧಿಯಲ್ಲಿ ಪ್ರಯಾಣದ ರಿಯಾಯಿತಿ ಸೌಲಭ್ಯ ಪಡೆಯುವಂತೆ ರಾಜ್ಯ ಆಯುಕ್ತರು ಪಡೆಯುವುದು.

**(3) ವೈದ್ಯಕೀಯ ಸೌಲಭ್ಯ:**

ಕರ್ನಾಟಕ ಸರ್ಕಾರದ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಾವಳಿ, 1963ರಂತೆ ರಾಜ್ಯ ಆಯುಕ್ತರು ವೈದ್ಯಕೀಯ ಸೌಲಭ್ಯಗಳನ್ನು ಪಡೆಯುವುದು.

**33 E. ರಾಜೀನಾಮೆ ಮತ್ತು ವಜಾಗೊಳಿಸುವುದು:**

(1) ರಾಜ್ಯ ಆಯುಕ್ತರು ತಮ್ಮ ಸ್ವಂತ ಬರಹದಲ್ಲಿ ಲಿಖಿತವಾಗಿ ರಾಜ್ಯ ಸರ್ಕಾರಕ್ಕೆ ಸೂಚನೆ ಮೂಲಕ ಸಲ್ಲಿಸುವುದರೊಂದಿಗೆ ತಮ್ಮ ಹುದ್ದೆಗೆ ರಾಜೀನಾಮೆಯನ್ನು ನೀಡುವುದು.

(2) ರಾಜ್ಯ ಸರ್ಕಾರವು ರಾಜ್ಯ ಆಯುಕ್ತರನ್ನು ಸೇವೆಯಿಂದ ಈ ಕೆಳಗಿನ ಕಾರಣಕ್ಕೆ ವಜಾಗೊಳಿಸುವುದು–

(ಎ) ದಿವಾಳಿತನದಿಂದ ಬಿಡುಗಡೆ ಮಾಡುವ ಸಂದರ್ಭ ಸೃಷ್ಟಿಯಾದಲ್ಲಿ

(ಬಿ) ಅವರ ಕರ್ತವ್ಯ ಅವಧಿಯಲ್ಲಿ ಬೇರೆ ಕಛೇರಿಯ ಸೇವೆಗಾಗಿ ವೇತನ ಪಡೆಯುತ್ತಿದ್ದಲ್ಲಿ ಅಥವಾ ಅವರು ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿಯ ವ್ಯಾಪ್ತಿಯ ಹೊರಗಿನ ಚಟುವಟಿಕೆಗಳಲ್ಲಿ ಭಾಗಿಯಾದಲ್ಲಿ.

(ಸಿ) ಅಂಗವಿಕಲರ ಅಧಿನಿಯಮ 1995ರ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆ ಹಾಗೂ ಸಂಪೂರ್ಣ ಭಾಗವಹಿಸುವಿಕೆ) ಕಾಯ್ದೆಯ ಹಾಗೂ ಸರ್ಕಾರದಿಂದ ಕಾಲ ಕಾಲಕ್ಕೆ ಹೊರಡಿಸಲಾಗುವ ನಿಯಮಾವಳಿ ಅಥವಾ ಸುತ್ತೋಲೆಗಳಿಗೆ ವ್ಯತಿರಿಕ್ತವಾಗಿ ಕಾರ್ಯನಿರ್ವಹಿಸಿದಲ್ಲಿ.

(ಡಿ) ಯಾವುದಾದರೂ ಅಪರಾಧದ ಹಿನ್ನಲೆಯಲ್ಲಿ ನ್ಯಾಯಾಲದಿಂದ ರಾಜ್ಯ ಆಯುಕ್ತರ ಕಛೇರಿಯ ಪ್ರಭಾರವನ್ನು ವಹಿಸಿಕೊಂಡಿರುವ ವ್ಯಕ್ತಿಯು ಆರೋಪಿ ಎಂದು

ತೀರ್ಮಾನಿಸಿ ಜೈಲು ಶಿಕ್ಷಗೆ ಆದೇಶಿಸಿದ ಹಿನ್ನಲೆಯಲ್ಲಿ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪಥನಕ್ಕೆ ಗುರಿಯಾಗಿರುವರೆಂದು ಅನಿಸಿದಲ್ಲಿ;

(ಇ) ದೇಹದ ಶರೀರ / ಬುದ್ಧಿಮಟ್ಟ ಸುಸ್ಥಿತಿಯಲ್ಲಿ ಇರದ ಕಾರಣ, ಅಧಿನಿಯಮದ ವ್ಯಾಪ್ತಿಯಲ್ಲಿ ಕಛೇರಿಯ ನಿರ್ವಹಣೆಗೆ ಅಸಮರ್ಥರೆಂದು ಅಥವಾ ದುರ್ನಡತೆಯು ಸಾಕ್ಷಿಯಾಗಿರುವುದನ್ನು ಸರ್ಕಾರದ ಅಭಿಪ್ರಾಯದಲ್ಲಿ ಕಂಡುಬಂದಲ್ಲಿ;

(ಎಫ್) 15 ದಿನಗಳಿಗೆ ಅಥವಾ ಹೆಚ್ಚಿನ ದಿನಗಳಿಗೆ ಸತತವಾಗಿ ಕರ್ತವ್ಯಕ್ಕೆ ಗೈರು ಹಾಜರಾದ ಬಗ್ಗೆ ಸರ್ಕಾರದಿಂದ ರಜೆ ಪಡೆಯದೇ ಇದ್ದಲ್ಲಿ: ಅಥವಾ

(ಜಿ) ವಿಕಲಚೇತನರ ಹಿತದೃಷ್ಟಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸದೆ ವ್ಯತಿರಿಕ್ತವಾಗಿ ರಾಜ್ಯ ಆಯುಕ್ತರ ಕಛೇರಿಯನ್ನು ಮುನ್ನಡೆಸಿರುವುದು ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಕಂಡುಬಂದಲ್ಲಿ.

(3) ರಾಜ್ಯ ಸರ್ಕಾರವು ಉಪ ನಿಯಮ 2ರಂತೆ ರಾಜ್ಯ ಆಯುಕ್ತರನ್ನು ಸೇವೆಯಿಂದ ವಜಾಗೊಳಿಸಲು ವಿಚಾರಣೆ ಪ್ರಕ್ರಿಯೆಯು ಜಾರಿಯಲ್ಲಿರುವ ಹಂತದಲ್ಲಿ ವಿಚಾರಣಾ ನಡವಳಿಯನ್ನು ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸಬಹುದಾಗಿರುತ್ತದೆ.

ಕನಾಟಕ ರಾಜ್ಯ ಪಾಲರ ಆದೇಶ
ಮತ್ತು ಅವರ ಹೆಸರಿನಲ್ಲಿ

(ಸಂಧ್ಯಾ ಎಲ್. ನಾಯಕ್)
ಸರ್ಕಾರದ ಅಧೀನ ಕಾರ್ಯದರ್ಶಿ–1
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ, ಬೆಂಗಳೂರು.

ಇವರಿಗೆ:

ಸಂಕಲನಕಾರರು, ಕರ್ನಾಟಕ ಗೆಜೆಟ್, ಬೆಂಗಳೂರು, ವಿಶೇಷ ರಾಜ್ಯಪತ್ರ ಭಾಗ–IV-ಎ ರಲ್ಲಿ ಪ್ರಕಟಿಸಲು

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ",ಅಂಚೆ ಪಟ್ಟಿಗೆ ಸಂಖ್ಯೆ: 5329, ಬೆಂಗಳೂರು–560001
2. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು
4. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
6. ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ,ಅಭಯ ಸಂಕೀರ್ಣ,2ನೇ ಮಹಡಿ,ರಿಸಲ್ದಾರ್ ರಸ್ತೆ, ಶೇಷಾದ್ರಿ ಪುರಂ.ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು.
8. ನಿರ್ದೇಶಕರು, ವಾರ್ತಾ ಇಲಾಖೆ, ನಂ:17, ವಾರ್ತಾಸೌಧ, ಭಗವಾನ್ ಮಹಾವೀರ ರಸ್ತೆ, (ಇನ್‌ಫೆಂಟ್ರಿ ರಸ್ತೆ) ಬೆಂಗಳೂರು.
9. ಕರ್ನಾಟಕ ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರು
10. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು. ವಿಧಾನಸೌಧ, ಬೆಂಗಳೂರು.
11. ಮಾನ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ (ಪ್ರಕರಣ ಸಂಖ್ಯೆ:135/2016) ವಿಧಾನಸೌಧ, ಬೆಂಗಳೂರು
12. ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

13. ಸಹಾಯಕ ಆಯುಕ್ತರು, ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಕಛೇರಿ ಕರ್ನಾಟಕ, ನಂ.55, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಟ್ಟಡ,ಅಭಯ ಸಂಕೀರ್ಣ, 2ನೇ ಮಹಡಿ, ರಿಸಲ್ದಾರ್ ರಸ್ತೆ, ಶೇಷಾದ್ರಿ ಪುರಂ. ಬೆಂಗಳೂರು.
14. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಲೆಕ್ಕ ಪತ್ರ ಶಾಖೆ) ವಿಧಾನಸೌಧ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು, ಶಾಸನ ರಚನಾ ಇಲಾಖೆ, ವಿಧಾನಸೌಧ, ಬೆಂಗಳೂರು.
16. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 & 9), ವಿಧಾನಸೌಧ, ಬೆಂಗಳೂರು.
17. ಸರ್ಕಾರದ ಅಧೀನ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ (ಸೇವಾ ನಿಯಮಗಳು) ವಿಧಾನಸೌಧ, ಬೆಂಗಳೂರು.
18. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
19. ಸರ್ಕಾರದ ಉಪ ಕಾರ್ಯದರ್ಶಿಗಳು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
20. ಶಾಖಾ ಕಡತ/ ಒಡಿಜಿಸಿ/ ಹೆಚ್ಚುವರಿ ಪ್ರತಿಗಳು.